



ಬೆಂಚಿನ ಇನ್ನೊಂದು ತುದಿಯಲ್ಲಿ ಮಗು ಅಭ್ಯಾಸ ಮಾಡುತ್ತಲೋ ಆಟ ಆಡುತ್ತಲೋ ಕುಳಿತಿರಬಹುದು.

ತಿಂಡಿಗೆ ಚೌಚೌ ಬಾತ್ ಮಾಡಲಾಗಿದೆ ಎಂದಿಟ್ಟುಕೊಳ್ಳಿ. ಒಬ್ಬರಿಗೆ ಏಳು ಗಂಟೆಗೆ, ಮತ್ತೊಬ್ಬರಿಗೆ ಎಂಟಕ್ಕೆ, ಇನ್ನೊಬ್ಬರಿಗೆ ಒಂಬತ್ತಕ್ಕೆ ತಿಂಡಿ ಬೇಕು ಎಂದಾದರೆ ಹೀಟ್ ಡ್ರಾಯರ್‌ನಲ್ಲಿಟ್ಟ ಚೌಚೌ ಬಾತ್ ಬೆಳಿಗ್ಗೆ ಮಾಡಿದಾಗ ಹೇಗಿತ್ತೋ ಎಲ್ಲರೂ ತಿನ್ನುವಾಗ ಅದೇ ತಾಜಾತನ ಉಳಿಸಿಕೊಂಡಿರುತ್ತದೆ. ಈ ಕಿಚನ್‌ನಲ್ಲಿ ಎಲ್‌ಇಡಿ ಬಲ್ಬುಗಳು ಎಲ್ಲಿವೆ ಎಂಬುದು ಕಾಣುವುದಿಲ್ಲ. ಆದರೆ, ಹಿತವಾದ ಬೆಳಕನ್ನು ಹರಡಿರುತ್ತವೆ.

ಪರಿಸರ ಸ್ನೇಹಿ ತಂತ್ರಜ್ಞಾನ ಈ ಕಿಚನ್‌ನಲ್ಲಿ ಎದ್ದು ಕಾಣುತ್ತದೆ. ನೂರಕ್ಕೆ ನೂರರಷ್ಟು ಪುನರ್‌ಬಳಕೆ ಮಾಡಬಹುದಾದ ವಸ್ತುಗಳನ್ನಷ್ಟೇ ಇಲ್ಲಿ ಬಳಕೆ ಮಾಡಲಾಗಿದೆ. ಒಮ್ಮೆಯೂ ಅಡುಗೆ ಮಾಡಿ ಗೊತ್ತಿಲ್ಲದವರು, ಟ್ಯಾಬ್‌ನಲ್ಲಿ ವಿಧಾನ ನೋಡಿಕೊಂಡು ಅಡುಗೆ ಮಾಡಬಹುದು. ಅಳತೆಗೆ ಚಿಂತಿಸುವ ಅಗತ್ಯವಿಲ್ಲ. ತೂಕದ ಯಂತ್ರವೇ ಒಳಗಿದೆ.

ಫಾರ್ಮಾ ಮೆಂಟಿಸ್, ಅರ್ಥಮೆಟಿಕಾ, ರಿಸಿಕ್ಲೊಂಟಿಕಾ, ನ್ಯೂ ಲಾಜಿಕಾ, ಜೀನಿಯಸ್ ಲಾಜಿಕಾ –ಹೀಗೆ ಐದು ವಿಧದ ಕಿಚನ್‌ಗಳು ಲಭ್ಯ. ಗ್ರಾಹಕರ ಅಭಿರುಚಿಗೆ ತಕ್ಕಂತೆ ಅಗತ್ಯ ಮಾರ್ಪಾಡುಗಳಿಗೂ ಅವಕಾಶವಿದೆ.

ಕಿಚನ್‌ಗಾಗಿಯೇ ಮಳಿಗೆ ತೆರೆಯುವ ಯೋಚನೆ ಹೇಗೆ ಬಂತು ಎಂದು ಕೇಳಿದರೆ 'ನಮ್ಮ ತಂದೆ ರಿಯಲ್ ಎಸ್ಟೇಟ್ ಉದ್ಯಮಿ. ಚಿಕ್ಕವಳಿದ್ದಾಗ ಅವರೊಂದಿಗೆ ನಾನು ಸೈಟ್ ಸುತ್ತು ಹೊಡೆಯುತ್ತಿದ್ದೆ. ವಾಸ್ತುಶಿಲ್ಪದಲ್ಲೇ ಎಂಜಿನಿಯರಿಂಗ್ ಪದವಿ ಪೂರೈಸಿದೆ. ಒಳಾಂಗಣ ವಿನ್ಯಾಸದ ಕೋರ್ಸ್ ಮಾಡಲು ಅಮೆರಿಕಕ್ಕೆ ಹೋದಾಗ ಕಿಚನ್‌ನ ವಿರಾಟ್ ರೂಪದ ದರ್ಶನವಾಯಿತು. ಕುಟುಂಬದ ಸದಸ್ಯರು ಒಟ್ಟಾಗಿ ಕಳೆಯುವ ಜಾಗ ಅದು. ಕಿಚನ್ ವಿನ್ಯಾಸದಲ್ಲೇ ಮುಂದುವರಿಯಬೇಕು ಎಂದು ಆಗಲೇ ನಿರ್ಧರಿಸಿದೆ' ಎಂದು ಹೇಳಿದರು ನಿವೇದಿತಾ.

ವಾಲ್‌ಕುಚಿನೆ ತುಂಬಾ ದೊಡ್ಡ ಬ್ರಾಂಡ್. ಅದರ ಮೇಲೆ ಆಸಕ್ತಿ ಬೆಳೆದಾಗ ಇಟಲಿಗೆ ಹೋಗಿ ತಯಾರಿಕಾ ಘಟಕ ನೋಡಿದೆವು. ಅಲ್ಲಿನ ತಂತ್ರಜ್ಞಾನ, ಗುಣಮಟ್ಟ ನೋಡಿ, ಆ ಕ್ಷಣವೇ ಬೆಂಗಳೂರಿನ ಷೋರೂಂ ವಿನ್ಯಾಸಕ್ಕೆ ಕುಳಿತುಬಿಟ್ಟೆವು ಎಂದು ವಿವರಿಸಿದರು.

ಐದು ಲಕ್ಷ ರೂಪಾಯಿಯಿಂದ ಒಂದು ಕೋಟಿ ರೂಪಾಯಿವರೆಗೆ ಈ ಕಿಚನ್‌ಗಳ ಬೆಲೆ ಇದೆ. ಷೋರೂಂ ಆರಂಭವಾಗಿ ವರ್ಷದಲ್ಲೇ 30 ಕಿಚನ್‌ಗಳನ್ನು ಅಳವಡಿಸಲಾಗಿದೆ. ಮೂರು ತಿಂಗಳ ಈಚೆಗೆ ಬೇಡಿಕೆ ಹೆಚ್ಚಾಗಿದೆಯಂತೆ. ವಿಲ್ಲಾಗಳಲ್ಲೂ ವಾಲ್‌ಕುಚಿನೆ ಕಾಣಿಸಿಕೊಳ್ಳುತ್ತಿದೆ.

ಷೋರೂಂನಿಂದ ಹೊರಡುವ ಮುನ್ನ ನಿವೇದಿತಾ ಒಂದು ವಿಡಿಯೊ ತೋರಿಸಿದರು. ಅದು ಕೈಸನ್ನೆಗೆ ಮಾತು ಕೇಳುವ ಕಿಚನ್‌ನ ದೃಶ್ಯಾವಳಿ. ಪರದೆಗೆ ಮೇಲೇಳುವಂತೆ ಕೈಸನ್ನೆ ಮಾಡಿದರೆ ಅದು ಮೇಲೇಳುತ್ತದೆ. ಹಾಗೆಯೇ ಡ್ರಾಯರ್ ಬಾಗಿಲು ತೆರೆಯುತ್ತದೆ. ಸೆನ್ಸರ್‌ನಿಂದ ಈ ವ್ಯವಸ್ಥೆ ಕಲ್ಪಿಸಲಾಗಿದೆಯಂತೆ. ಈಗಾಗಲೇ ಇಟಲಿ ಮಾರುಕಟ್ಟೆಗೆ ಬಂದಿರುವ ಈ ಕಿಚನ್, ಇನ್ನು ಎರಡು ತಿಂಗಳಲ್ಲಿ ನಮ್ಮಲ್ಲಿಗೂ ಬರಲಿದೆ. 'ಆಗ ಖಂಡಿತಾ ನೋಡಲು ಬರಬೇಕು' ಎಂದು ಅವರು ಬೀಳ್ಕೊಟ್ಟರು.

**(ನಿವೇದಿತಾ ಸಂಪರ್ಕ ಸಂಖ್ಯೆ:** 9945235618, 08040976999)




# ಶ್ರೀ ಪಂಚಮುಖಿ ಜ್ಯೋತಿಷ್ಯಂ

INDIA'S MOST POPULAR ASTROLOGER

**ಪಂಡಿತ. ಶ್ರೀ ಗಣೇಶ್ ಕುಮಾರ್** ಶ್ರೀ ಶ್ರೀ ಹನುಮಾನ್ ಆರಾಧಕರು

ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.

600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.

ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.

**ಬೆಂಗಳೂರು ಖಾಯಂ ಮನೆ ವಿಳಾಸ** ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು-18.

**ಮೈಸೂರಿನಲ್ಲಿಯೂ ಲಭ್ಯವಿರುತ್ತಾರೆ**

ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.

ಬೆಂಗಳೂರು ಮೈಸೂರು **9880444450**

